ಎಲ್.ಎಸ್.ಎಸ್. ಅವರ ವ್ಯಾಖ್ಯಾನದ ಸ್ವರೂಪವು ಹೀಗಿದೆ: ಮೊದಲಿಗೆ ಅವರು ನಾಟಕಕಾರನನ್ನು ಹಾಗೂ ಅವನ ನಾಟಕವನ್ನು ಪರಿಚಯಿಸಿ, ಅನಂತರ ಆಯಾಯಾ ನಾಟಕಗಳ ಸಂವಿಧಾನವನ್ನು ವಿಸ್ತಾರವಾಗಿ ವಿವರಿಸಿ, ಕೊನೆಗೆ ಆ ವಿವರಗಳನ್ನಾಧರಿಸಿದ ಮೌಲ್ಯಮಾಪನವನ್ನು ದಾಖಲಿಸುತ್ತಾರೆ. ಪರಿಣಾಮತಃ, ಪ್ರತಿಯೊಂದು ನಾಟಕದ ಬಗ್ಗೆಯೂ ಸೂಕ್ಷ್ಮ ಒಳನೋಟಗಳನ್ನು ಕೊಡುವುದು ಅವರಿಗೆ ಸಾಧ್ಯವಾಗುತ್ತದೆ. ಉದಾಹರಣೆಗೆ:

ಕಾಳಿದಾಸನ ನಾಟಕದ 'ಶಿಲ್ಪ'ವನ್ನು ವಿಶ್ಲೇಷಿಸುತ್ತಾ, ಎಲ್.ಎಸ್.ಎಸ್. ನಾಟಕದ ವಿಶಿಷ್ಟ ಶಿಲ್ಪವು 'ಬಿಂಬ–ಪ್ರತಿಬಿಂಬ' (mirror image) ತಂತ್ರವನ್ನು ದುಡಿಸಿಕೊಳ್ಳುತ್ತದೆ ಎಂದು ಮಂಡಿಸುತ್ತಾರೆ. ಈ ಹೇಳಿಕೆಯನ್ನು ಸಮರ್ಥಿಸಲು ನಾಟಕದ ಮೊದಲ ಹಾಗೂ ಕೊನೆಯ ದೃಶ್ಯಗಳನ್ನು ದೀರ್ಘವಾಗಿ ಚರ್ಚಿಸುತ್ತಾರೆ ಹಾಗೂ ಆ ದೃಶ್ಯಗಳು ಹೇಗೆ ಸಮಾನವಾಗಿವೆ ಎಂಬುದನ್ನು ತೋರಿಸುತ್ತಾರೆ: ಎರಡರಲ್ಲಿಯೂ ಋಷ್ಯಾಶ್ರಮಗಳಿವೆ; ಎರಡರಲ್ಲಿಯೂ ದುಶ್ಯಂತನು ಮೊದಲು ಶಕುಂತಲೆಯ ಸಖಿಯರನ್ನು ನೋಡಿ ಅನಂತರ ಶಕುಂತಲೆಯನ್ನು ನೋಡುತ್ತಾನೆ; ಅನಂತರ ಅವರಿಬ್ಬರೂ ಒಂದಾಗುತ್ತಾರೆ; ಇತ್ಯಾದಿ. ಎಲ್.ಎಸ್.ಎಸ್. ವಾದವೇನೆಂದರೆ, ಈ ತಂತ್ರದಿಂದ ಪ್ರೇಕ್ಷಕರಿಗೆ ಹಿಂದಿನ ಕಥೆಯ ನೆನಪು ಬಂದು, ಈ ಎರಡು ದೃಶ್ಯಗಳ ನಡುವೆ ಆಗಿರುವ ಬದಲಾವಣೆಯ ಕಾರಣಗಳೂ ಅವರ ಅರಿವಿಗೆ ಬರುತ್ತದೆ. ಎಂದರೆ, 'ಅಭಿಜ್ಞಾನ'ವು ದುಶ್ಯಂತ–ಶಕುಂತಲೆಯರಿಗಷ್ಟೇ ಅಲ್ಲದೆ ಪ್ರೇಕ್ಷಕರಿಗೂ ಅನ್ವಯಿಸುತ್ತದೆ.

3) ಶೇಕ್ಸ್‌ಪಿಯರ್‌ನ ಸಮಗ್ರ ನಾಟಕ ಕಥೆಗಳು (2017): ಭಾರತೀಯ ಇಂಗ್ಲಿಷ್ ಪ್ರಾಧ್ಯಾಪಕರೆಲ್ಲರಿಗೂ ಇರುವಂತೆ ಎಲ್.ಎಸ್.ಎಸ್. ಅವರಿಗೂ ಶೇಕ್ಸ್‌ಪಿಯರ್ ಬಗ್ಗೆ ಅಗಾಧ ಪ್ರೀತಿ–ಮೆಚ್ಚುಗೆಗಳಿವೆ. ಪ್ರಾಧ್ಯಾಪಕರಾಗಿ ಅವರು ಶೇಕ್ಸ್‌ಪಿಯರ್ ನಾಟಕಗಳನ್ನು ತರಗತಿಗಳಲ್ಲಿ ತಲ್ಲೀನತೆಯಿಂದ ಬೋಧಿಸುತ್ತಿದ್ದುದನ್ನು ಅವರ ಅನೇಕ ವಿದ್ಯಾರ್ಥಿಗಳು

